## ಈ ಲೇಖನದ ವಿಷಯಾನುಕ್ರಮಣಿಕೆ


ಧರ್ಮಪಿಂಡ ಮತ್ತು ಸನಾತನಧರ್ಮದ ಸರ್ವಶ್ರೇಷ್ಠತೆ 2

ಪ್ರಥಮ ಧರ್ಮಪಿಂಡ 4

ದ್ವಿತೀಯ ಧರ್ಮಪಿಂಡ 7

ತೃತೀಯ ಧರ್ಮಪಿಂಡ 9

ಚತುರ್ಥ ಧರ್ಮಪಿಂಡ 10

# ಧರ್ಮಪಿಂಡ ಮತ್ತು ಸನಾತನಧರ್ಮದ ಸರ್ವಶ್ರೇಷ್ಠತೆ

ವೇದ ಪುರಾಣಗಳು ತಿಳಿಸಿ ಹೇಳಿರುವ ತತ್ವಗಳು, ಅನುಷ್ಠಾನಗಳು ನಮ್ಮ ಧರ್ಮದ ಸರ್ವಶ್ರೇಷ್ಠತೆಯನ್ನು ಸಾರಿ ಹೇಳುವ ವಿಜಯಪತಾಕೆಗಳು.

ಅದು ಗೌರೀಹಬ್ಬವಾಗಿರಲಿ, ಸಂಕ್ರಾಂತಿಯಾಗಿರಲಿ, ಗ್ರಹಣದ ಆಚರಣೆಯಾಗಿರಲಿ, ಶ್ರಾದ್ಧವಾಗಿರಲಿ ಕಡೆಗೆ ಸಂಧ್ಯಾವಂದನೆಯಾಗಿರಲಿ, ಪ್ರತಿಯೊಂದರಲ್ಲಿಯೂ ಮಾನವೀಯತೆ, ಸೌಹಾರ್ದಭಾವನೆ, ಜಗತ್ತಿಗೆ ಒಳಿತನ್ನು ಬಯಸುವ ಅಂಶ ಇದ್ದೇ ಇರುತ್ತದೆ. ಕೇವಲ ಸ್ವಾರ್ಥಕ್ಕಾಗಿ ಧರ್ಮದ ಆಚರಣೆಯನ್ನು ನಮ್ಮ ವೇದ ಪುರಾಣಗಳು ವಿಧಿಸಿಯೇ ಇಲ್ಲ.

ಮಹಾಲಯಶ್ರಾದ್ಧದಲ್ಲಿ ಧರ್ಮಪಿಂಡಪ್ರದಾನ ಎಂಬ ಒಂದು ಭಾಗವಿದೆ. ಮನುಷ್ಯನಾದವನು ಅದರಲ್ಲಿಯೂ ಬ್ರಾಹ್ಮಣನಾದವನು ಸದಾ ಸಕಲ ಸಜ್ಜನರ ಹಿತವನ್ನು ಬಯಸಬೇಕು ಎನ್ನುವ ತತ್ತ್ವವನ್ನು ಕೇಳಿಯೇ ಇದ್ದೇವೆ. ಆದರೆ, ಬರಿಯ ಬಾಯಿಮಾತನಲ್ಲಲ್ಲ ನಮ್ಮ ಹಬ್ಬ, ಹರಿದಿನ, ಕಡೆಗೆ ಶ್ರಾದ್ಧದ ದಿವಸದಲ್ಲಿ ಸಹಿತ ಸಕಲರ ಹಿತವನ್ನು ಬಯಸುವ ಒಂದು ವಿಧಿಯೇ ಇದೆ.

ಸಮಸ್ತ ಪಿತೃಗಳಿಗೂ ಪಿಂಡಪ್ರದಾನ ಮಾಡಿದ ಬಳಿಕ ಈ ಧರ್ಮಪಿಂಡಪ್ರದಾನ ಆರಂಭವಾಗುತ್ತದೆ. ದಕ್ಷಿಣ, ಪಶ್ಚಿಮ, ಉತ್ತರ ಮತ್ತು ಪೂರ್ವ ದಿಕ್ಕಗಳಲ್ಲಿ ಕ್ರಮವಾಗಿ ನಾಲ್ಕು ಧರ್ಮಪಿಂಡಗಳನ್ನಿಡಬೇಕು. ಆ ಪಿಂಡಗಳನ್ನಿಡುವ ಶ್ಲೋಕ ಮತ್ತು ಅದರ ಅರ್ಥವನ್ನು ಬರೆಯುತ್ತೇನೆ. ಓದಿ, ನಮ್ಮ ಸನಾತನ ಧರ್ಮದ ಪ್ರತಿಯೊಂದು ಆಚರಣೆಯಲ್ಲಿ ಹಾಸುಹೊಕ್ಕಾಗಿರುವ ಮಾನವೀಯತೆ, ವಿಶ್ವಬಾಂಧವತೆಗಳನ್ನು 'ಅನುಭವಿಸಿ'.

## ಪ್ರಥಮ ಧರ್ಮಪಿಂಡ

**ಆ ಬ್ರಹ್ಮಣೋ ಯೇ ಪಿತೃವಂಶಜಾತಾಃ**
**ಮಾತುಸ್ತಥಾ ವಂಶಭವಾ ಮದೀಯಾಃ**
**ವಂಶದ್ವಯೇಽಸ್ಮಿನ್ ಮಮ ದಾಸಭೂತಾಃ**
**ಭೃತ್ಯಾಸ್ತಥೈವಾಶ್ರಿತಸೇವಕಾಶ್ಚ ।**

**ಮಿತ್ರಾಣಿ ಸಖ್ಯಃ ಪಶವಶ್ಚ ವೃಕ್ಷಾಃ**
**ದೃಷ್ಟಾಶ್ಚ ಸ್ಪೃಷ್ಟಾಶ್ಚ ಕೃತೋಪಕಾರಾಃ**
**ಜನ್ಮಾಂತರೇ ಯೇ ಮಮ ಸಂಗತಾಶ್ಚ**
**ತೇಭ್ಯಃ ಸ್ವಧಾ ಪಿಂಡಮಹಂ ದದಾಮಿ ॥**

ನನ್ನ ತಂದೆಯ ಮತ್ತು ತಾಯಿಯ ವಂಶದಲ್ಲಿ ಅವರ ತಂದೆಯವರಿಂದ ಆರಂಭಿಸಿ ಬ್ರಹ್ಮದೇವರ ವರೆಗಿನ ಸಮಸ್ತ ವಂಶದಲ್ಲಿ ಹುಟ್ಟಿದ ಸಮಸ್ತರೂ ನನ್ನವರೇ! ಮದೀಯಾಃ!!! ಆ ಎಲ್ಲ ನನ್ನ ಬಂಧುಗಳಿಗೆ,

ಈ ಎರಡೂ ವಂಶಗಳಲ್ಲಿ  ಯಾರು ಯಾರು ನಮ್ಮ ಮನೆಗಳಲ್ಲಿ ಕೆಲಸ ಮಾಡಿದ ಕೆಲಸದವರಿದ್ದಾರೆ, ನಮ್ಮನ್ನು ಧಣಿ ಎಂದು ಆದರಿಸಿದವರಿದ್ದಾರೆ, ನಮ್ಮನ್ನು ಆಶ್ರಯಿಸಿದ ಜನರನ್ನು ಸೇವಿಸಿದ್ದಾರೆ,

(ಅಂದರೆ ನಮ್ಮ ಮನೆಯಲ್ಲಿ ಕೆಲಸ ಮಾಡಿದವರ ಹೆಂಡತಿ ಮಕ್ಕಳು ಮುಂತಾದವರು) ಅವರಿಗೆ,

ಮಿತ್ರಾಣಿ = ನನ್ನ ಅನಂತಜನ್ಮಗಳಲ್ಲಿ ನನ್ನನ್ನು ಅರಿತು, ನನ್ನನ್ನು ಕಷ್ಟಗಳಿಂದ ಪಾರು ಮಾಡಿದ ಗೆಳಯ ಗೆಳತಿಯರಿದ್ದಾರೆ (ಮಿತ್ರಮ್ - ಮಿನೋತಿ ತ್ರಾಯತೇ ಚ, ನಮ್ಮನ್ನು ಸರಿಯಾಗಿ ಅರಿಯುವವನು, ಪೊರೆಯುವವನು ಅವನೇ ಗೆಳೆಯ/ಗೆಳತಿ ), ಅವರಿಗೆ

ಸಖ್ಯಃ = ನನ್ನನ್ನು ಸಂತೋಷ ಪಡಿಸಿದ ಗೆಳೆಯ ಗೆಳತಿಯಿದ್ದಾರೆ, ನನ್ನ ಸುಖ ದುಃಖ ಕಾಲದಲ್ಲಿ ನನ್ನೊಟ್ಟಿಗಿದ್ದವರು, ಅವರಿಗೆ

ಕೃತೋಪಕಾರಾಃ ಪಶವಃ = ಹಾಲು ಹೈನನ್ನು ನೀಡಿದ, ಹತ್ತು ಹಲವು ರೀತಿಯಲ್ಲಿ ನನ್ನನ್ನು ಅನಂತ ಜನ್ಮದಲ್ಲಿ ಪೊರೆದ ಪ್ರಾಣಿಗಳಿಗೆ, ಪಕ್ಷಿಗಳಿಗೆ,

ಕೃತೋಪಕಾರಾಃ ದೃಷ್ಟಾಶ್ಚ, ಸ್ಪೃಷ್ಟಾಶ್ಚ ವೃಕ್ಷಾಃ = ಹಣ್ಣು ನೆರಳುಗಳನ್ನು ನೀಡಿ ಉಪಕಾರ ಮಾಡಿದ ಮರಗಳು, ಯಾವ ಮರಗಳನ್ನು ನೋಡಿ ನಾನು

ಆನಂದ ಪಟ್ಟಿದ್ದೇನೋ, ಆ ಆನಂದವನ್ನು ನನಗೆ ನೀಡಿದ ಮರ ಗಿಡಗಳು, ಯಾವ ಗಿಡ ಮರಗಳನ್ನು ಮುಟ್ಟಿ ಆನಂದ ಪಟ್ಟಿದ್ದೇನೋ, ಆ ಆನಂದವನ್ನು ನೀಡಿದ ಗಿಡ ಮರಗಳು, ಆ ಎಲ್ಲ ಮರಗಳಲ್ಲಿದ್ದ ಜೀವಗಳಿಗೆ,

ನನ್ನ ಹಿಂದಿನ ಎಲ್ಲ ಜನ್ಮಗಳಲ್ಲಿ ನನಗೆ ಯಾವುದೇ ರೀತಿಯಲ್ಲಿ ಸಂಬಂಧಿಸಿದ ಪ್ರತಿಯೊಬ್ಬ ಜೀವನಿಗೆ

ಅಹಂ ಪಿಂಡ ದದಾಮಿ. ಈ ಅನ್ನವನ್ನು ನೀಡುತ್ತೇನೆ.

ಸ್ವಧಾ = ಸ್ವತಂತ್ರನಾದ ನಾರಾಯಣ ಎಲ್ಲರಲ್ಲಿಯೂ ಇದ್ದಾನೆ. ಎಲ್ಲರನ್ನೂ ಧಾರಣ ಮಾಡಿದ್ದಾನೆ. ಅದಕ್ಕೆ ಅವನಿಗೆ ಸ್ವಧಾ ಎಂದು ಹೆಸರು. ಆ ನಾರಾಯಣ ನಾನು ನೀಡಿದ ಈ ಅನ್ನವನ್ನು ಅಕ್ಷಯ ಮಾಡಿ ಆ ಎಲ್ಲರಿಗೂ ತಲುಪಿಸಲಿ.

ಇದು ಮೊದಲನೆಯ ಧರ್ಮಪಿಂಡ. ಇದನ್ನು ದಕ್ಷಿಣ ದಿಕ್ಕಿನಲ್ಲಿಟ್ಟು ಮತ್ತೊಂದು ಪಿಂಡವನ್ನು ತೆಗೆದುಕೊಳ್ಳಬೇಕು.

## ದ್ವಿತೀಯ ಧರ್ಮಪಿಂಡ

**ಪಿತೃವಂಶೇ ಮೃತಾ ಯೇ ಚ**
**ಮಾತೃವಂಶೇ ತಥೈವ ಚ ।**
**ಗುರು-ಶ್ವಶುರ-ಬಂಧೂನಾಂ**
**ಯೇ ಚಾನ್ಯೇ ಬಾಂಧವಾಃ ಸ್ಮೃತಾಃ ॥**

**ಯೇ ಮೇ ಕುಲೇ ಲುಪ್ತಪಿಂಡಾಃ**
**ಪುತ್ರದಾರವಿವರ್ಜಿತಾಃ ।**
**ಕ್ರಿಯಾಲೋಪಗತಾಶ್ಚೈವ**
**ಜಾತ್ಯಂಧಾಃ ಪಂಗವಸ್ತಥಾ ॥**

**ವಿರೂಪಾ ಆಮಗರ್ಭಾಶ್ಚ**
**ಜ್ಞಾತಾಜ್ಞಾತಾಃ ಕುಲೇ ಮಮ ।**
**ದರ್ಮಪಿಂಡೋ ಮಯಾ ದತ್ತೋ**
**ಹ್ಯಕ್ಷಯ್ಯಮುಪತಿಷ್ಠತು ॥**

ನನ್ನ ತಂದೆಯ ವಂಶದಲ್ಲಿ,
ತಾಯಿಯ ವಂಶದಲ್ಲಿ,
ನನಗೆ ವಿದ್ಯೆಯನ್ನು ಉಪದೇಶಿಸಿದ ಗುರುಗಳ ವಂಶದಲ್ಲಿ,
ನನಗೆ ಹೆಣ್ಣನ್ನು ನೀಡಿದ ಮಾವನ ವಂಶದಲ್ಲಿ

ನನ್ನ ಎಲ್ಲ ಬಂಧುಗಳ ವಂಶದಲ್ಲಿ
ಹುಟ್ಟಿ ಮೃತರಾಗಿರುವ ಎಲ್ಲ ಅವರವರ
ಬಾಂಧವರಿಗೆ,

ನನ್ನ ವಂಶದಲ್ಲಿ ಹುಟ್ಟಿ ಹೆಂಡತಿ ಮಕ್ಕಳಿಲ್ಲದೇ ಸತ್ತು
ಹೋದವರಿಗೆ,
ಸರಿಯಾಗಿ ಸಂಸ್ಕಾರವಾಗದೇ ಮೃತರಾದವರಿಗೆ
ಹುಟ್ಟುತ್ತಲೇ ಕಣ್ಣಿಲ್ಲದೇ, ಕಾಲಿಲ್ಲದೇ,
ಅಂಗವಿಕಲರಾಗಿ ಹುಟ್ಟಿದವರಿಗೆ
ಸರಿಯಾದ ಮನುಷ್ಯರೂಪವಿಲ್ಲದೇ ಹುಟ್ಟಿದವರಿಗೆ,
ಗರ್ಭದಲ್ಲಿಯೇ ಸತ್ತು ಹೋದವರಿಗೆ,
ನನಗೆ ತಿಳಿದ, ತಿಳಿಯದ ನನ್ನ ಎಲ್ಲ ಬಾಂಧವರಿಗೆ,

ಈ ಧರ್ಮಪಿಂಡವನ್ನು ನೀಡುತ್ತಿದ್ದೇನೆ.
ಅಕ್ಷಯನಾಮಕ ಶ್ರೀಹರಿಯ ಅನುಗ್ರಹದಿಂದ ಈ
ಅನ್ನ ಅಕ್ಷಯವಾಗಿ ಅವರೆಲ್ಲರಿಗೂ ತಲುಪಲಿ.

ಈ ಪಿಂಡವನ್ನು ಪಶ್ಚಿಮದಿಕ್ಕಿನಲ್ಲಿಡಬೇಕು. ಆ
ನಂತರ ಮತ್ತೊಂದು ಧರ್ಮಪಿಂಡವನ್ನು
ಕೈಗೆತ್ತಿಕೊಳ್ಳಬೇಕು.

## ತೃತೀಯ ಧರ್ಮಪಿಂಡ

**ಉಚ್ಛಿನ್ನಕುಲವಂಶಾನಾಂ**
**ಯೇಷಾಂ ದಾತಾ ಕುಲೇ ನಹಿ ।**
**ಧರ್ಮಪಿಂಡೋ ಮಯಾ ದತ್ತೋ**
**ಹ್ಯಕ್ಷಯ್ಯಮುಪತಿಷ್ಠತು ॥**

ಯಾರ ಕುಲದ ವಿಚ್ಛೇದವಾಗಿದೆ,
ಯಾರ ವಂಶದ ವಿಚ್ಛೇದವಾಗಿದೆ,
ಯಾರ ಮನೆಯಲ್ಲಿ ಪಿಂಡ ನೀಡುವ ಯೋಗ್ಯ ಜನರಿಲ್ಲ
ಅಂತಹ ಜಗತ್ತಿನ ಸಮಸ್ತ ಮೃತರಿಗೂ
ಈ ಧರ್ಮಪಿಂಡವನ್ನು ನೀಡುತ್ತಿದ್ದೇನೆ. ಶ್ರೀಹರಿಯ ಅನುಗ್ರಹದಿಂದ ಇದು ಅವರೆಲ್ಲರಿಗೆ ಅಕ್ಷಯವಾಗಿ ತಲುಪಲಿ.

ಎಂದು ಹೇಳುತ್ತ ಈ ಪಿಂಡವನ್ನು ಉತ್ತರದಲ್ಲಿಡಬೇಕು.

## ಚತುರ್ಥ ಧರ್ಮಪಿಂಡ

ಆ ನಂತರ ಕಡೆಯ ಧರ್ಮಪಿಂಡವನ್ನು ತೆಗೆದುಕೊಂಡು, ಕಣ್ಣಗಳನ್ನು ಮುಚ್ಚಿ ನರಕದ ಘೋರಯಾತನೆಯಲ್ಲಿ ಬಿದ್ದಿರುವ ಸಜ್ಜನರನ್ನೊಮ್ಮೆ ನೆನೆಯಬೇಕು.

**ಅಸಿಪತ್ರವನೇ ಘೋರೇ**
**ಕುಂಭೀಪಾಕೇ ಚ ಯೇ ಗತಾಃ ।**
**ತೇಷಾಮುದ್ಧರಣಾರ್ಥಾಯ**
**ಇಮಂ ಪಿಂಡಂ ದದಾಮ್ಯಹಮ್ ॥**

ಭಯಂಕರ ಅಪರಾಧಗಳನ್ನು ಮಾಡಿ, ಅಸಿಪತ್ರ ನರಕದಲ್ಲಿ (ಇಲ್ಲಿ ಮರಗಳ ಎಲೆಗಳು ಉದುರುತ್ತಲೇ ಇರುತ್ತವೆ. ಒಂದೊಂದು ಎಲೆಯೂ ಕತ್ತಿಯಂತೆ ಚೂಪಾಗಿರುತ್ತದೆ. ಮೇಲಿನಿಂದ ಕೆಳಗೆ ಬೀಳುತ್ತಿದ್ದರೆ ಪಾತಕಿಗಳ ದೇಹದ ಮಾಂಸ ಅವಯವಗಳು ಕತ್ತರಿಸಿ ಬೀಳುತ್ತಿರುತ್ತವೆ) ಕುಂಭೀಪಾಕದ ನರಕದಲ್ಲಿ ಬಿದ್ದಿರುವ ಸಜ್ಜನರ ಉದ್ಧಾರಕ್ಕಾಗಿ ಈ ಪಿಂಡವನ್ನು ನೀಡುತ್ತೇನೆ.

ಯಮಧರ್ಮ, ಪಾರ್ವತೀಶ, ಲಕ್ಷ್ಮೀಪತಿಯರು ಕೃಪೆ ಮಾಡಿ ಅವರನ್ನು ಉದ್ಧರಿಸಲಿ

ಎಂದು ಈ ಧರ್ಮಪಿಂಡವನ್ನು ಪೂರ್ವ ದಿಕ್ಕಿನಲ್ಲಿಡಬೇಕು.

ನರಕದಲ್ಲಿ ಬಿದ್ದವರು ಅವರ ಪಾಪ ಮುಗಿಯುವವರೆಗೆ ಇರಲೇ ಬೇಕು. ಆದರೆ, ಭಗವಂತನ ಭಕ್ತರು ಯಮನನ್ನು, ರುದ್ರದೇವರನ್ನು, ಶ್ರೀಹರಿಯನ್ನು ಪ್ರಾರ್ಥನೆ ಮಾಡಿದಲ್ಲಿ ಅವರ ಭಕ್ತಿಗೆ ಮೆಚ್ಚುವ ಭಗವಂತ ಸ್ವಭಾವತಃ ಸಜ್ಜನರಾಗಿ ಸಹವಾಸದಿಂದ ತಪ್ಪು ಮಾಡಿ ನರಕಕ್ಕೆ ಬಂದ ಪಾತಕಿಗಳನ್ನು ಉದ್ಧಾರ ಮಾಡುತ್ತಾನೆ. ನಾರದರು ಈ ರೀತಿ ನಾರಕಿಗಳನ್ನು ಉದ್ಧಾರ ಮಾಡಿದ ಘಟನೆಯನ್ನು ವಾಯುಪುರಾಣದಲ್ಲಿ ಕೇಳುತ್ತೇವೆ. ಹೀಗೆ, ನಾವೂ ಸಹ ಶ್ರೀಹರಿಯ ಪ್ರಾರ್ಥನೆ ಮಾಡಿ ಧರ್ಮಪಿಂಡವನ್ನು ನೀಡಿದಲ್ಲಿ, ಈ ರೀತಿ ಜಗತ್ತಿನ ಸಜ್ಜನರು ಪ್ರಾರ್ಥನೆ ಮಾಡಿದಲ್ಲಿ ಆ ಪಾತಕಿ ಸಜ್ಜನರ ಶಿಕ್ಷೆಯ ಪರಿಮಾಣ ಕಡಿಮೆಯಾಗುತ್ತದೆ, ಉದ್ಧಾರವೂ ಆಗುತ್ತಾರೆ. ನಮಗಿರುವ ಕಿಂಚಿತ್

ಭಕ್ತಿಯಿಂದಲೇ ನಾವು ಪ್ರಾರ್ಥಿಸಿದರೂ ದೇವರು ಒಲಿಯುವದರಲ್ಲಿ ಸಂಶಯವಿಲ್ಲ.

ಬದುಕಿರುವಾಗ ನಮ್ಮ ಜೊತೆ ಬದುಕುತ್ತಿರುವ ಜನರಿಗೆ ಸಹಾಯ ಮಾಡಿಯೇ ಬದುಕಬೇಕು, ಇಲ್ಲದಿದ್ದರೆ ಅದು ಪಾಪಿಷ್ಠ ಬದುಕು ಎಂದು ಸಾರಿದ ಧರ್ಮ ನಮ್ಮ ವೇದಧರ್ಮ

**“ನಾರ್ಯಮಣಂ ಪುಷ್ಯತಿ ನೋ ಸಖಾಯಂ ಕೇವಲಾಘೋ ಭವತಿ ಕೇವಲಾದೀ” (ಋಗ್ವೇದ, ೧೦-೧೧೭- ೬)**

“ಬದುಕು ನೀಡಿದ ಭಗವಂತನನ್ನು ಮೆಚ್ಚಿಸದೆ, ಬದುಕಿನೊಟ್ಟಿಗಿನ ನಮ್ಮ ಎಲ್ಲ ಸಂಗಡಿಗರಿಗೆ ಸಹಾಯ ಮಾಡದೇ ಉಣ್ಣುವವನು ಕೇವಲ ಪಾಪವನ್ನೇ ಉಣ್ಣುತ್ತಾನೆ”

**“ಅಪೃಣನ್ ಮರ್ಡಿತಾರಂ ನ ವಿಂದತೇ” (ಋಗ್ವೇದ, ೧೦-೧೧೭-೧)**

“ದಾನ ಮಾಡದೇ, ಮತ್ತೊಬ್ಬರಿಗೆ ಸಹಾಯ ಮಾಡದೇ  ಬದುಕಿದಲ್ಲಿ ಭಗವಂತನೂ ನಮ್ಮ ರಕ್ಷಕನಾಗಲಾರ”

ಹೀಗೆ, ಬದುಕಿರಬೇಕಾದರೆ ಮತ್ತೊಬ್ಬರಿಗೆ ಸಹಾಯ ಮಾಡಿ ಬದುಕು, ಅಷ್ಟೇ ಅಲ್ಲ ನಿನಗೆ ಸಹಾಯ ಮಾಡಿದ ಮನುಷ್ಯರನ್ನಷ್ಟೇ ಅಲ್ಲ, ಪ್ರಾಣಿಪಕ್ಷಿಗಳನ್ನೂ ಮರಗಿಡಗಳನ್ನೂ ಮರೆಯಬೇಡ, ಅವರು ಬದುಕಿರುವಾಗಷ್ಟೇ ಅಲ್ಲ ಅವರು ಸತ್ತ ಬಳಿಕವೂ ಅವರನ್ನು ನೆನೆ, ಜನ್ಮಜನ್ಮದಲ್ಲಿಯೂ ನೆನೆ. ಕಾರಣ, ಜೀವ ಸಂಕುಲ ಇಂದಿನವರಿಗೆ ಉಳಿದಿದೆ ಎಂದರೆ ಈ ಪರೋಪಕಾರ ಎನ್ನುವ ಧರ್ಮದಿಂದಲೇ. ಹೀಗಾಗಿ ಅವರನ್ನು ಸದಾ ನೆನೆಯುತ್ತಿರು ಎಂದು ಕಲಿಸಿದ ಧರ್ಮ ನಮ್ಮ ಸನಾತನಧರ್ಮ.

ಹೀಗೆ, ನಮಗೆ ಸಂಬಂಧವಿರುವ, ಸಂಬಂಧವೇ ಇರದ ಸಜ್ಜನರಿಗಾಗಿ ಪ್ರಾರ್ಥನೆ ಮಾಡುವ ಪರಿಯನ್ನು ಹೇಳಿಕೊಡುವ ನಮ್ಮ ಸನಾತನಧರ್ಮದ ಮಾನವೀಯ ಮುಖ ನಮ್ಮನ್ನು ಬೆರಗುಗೊಳಿಸುತ್ತದೆ.

ಇರುವ ಸಮಾಜವನ್ನೇ ಒಡೆಯುವ ಬುದ್ಧಿಹೀನ ಜೀವಿಗಳೆಲ್ಲಿ?
ಸುತ್ತಲಿರುವ ಜನರಿಗಷ್ಟೇ ಅಲ್ಲ, ಸತ್ತು ಹೋದವರಿಗೂ, ಕಡೆಗೆ, ಪ್ರಾಣಿ, ಪಕ್ಷಿ, ಮರ ಗಿಡಗಳಲ್ಲಿರುವ ಜೀವಗಳಿಗೂ ಸುಖವನ್ನು ಬಯಸಿ ಅನ್ನವನ್ನು ಪ್ರದಾನ ಮಾಡುವದನ್ನು ಹೇಳಿಕೊಡುವ ನಮ್ಮ ಸನಾತನಧರ್ಮವೆಲ್ಲಿ?

ಈ ಬುದ್ಧಿಹೀನ ಜೀವಿಗಳು ನಮ್ಮ ಧರ್ಮದ ಅಂತಃಸತ್ವವನ್ನು ಅರ್ಥ ಮಾಡಿಕೊಳ್ಳುವದು ದೂರ ಉಳಿಯಿತು, ಅದರ ಎತ್ತರವನ್ನು ಕಾಣಲಿಕ್ಕೆ ಸಹಿತ ಸಾಧ್ಯವಿಲ್ಲದಷ್ಟು ಕುಬ್ಜರು ಅವರು. ಹಣ, ಪ್ರತಿಷ್ಠೆ, ಪ್ರಶಸ್ತಿಗಳಿಗಾಗಿ ತಮ್ಮ ಆತ್ಮವನ್ನೇ ಮಾರಿಕೊಂಡ ಈ ಜನರಿಗೆ ಆತ್ಮಗೌರವವೇ ಇಲ್ಲ, ಇನ್ನು ಸಮಕಾಲೀನ ಸಮಾಜಕ್ಕೆ, ಸನಾತನ ಸಂಸ್ಕೃತಿಗೆ, ಭವ್ಯ ಪರಂಪರೆಯ ಭಾರತಕ್ಕೆ ಗೌರವವನ್ನು ಸಲ್ಲಿಸಿಯಾರೇ? ತಮ್ಮ ಅಸ್ತಿತ್ವದಿಂದ ಮನುಕುಲಕ್ಕೇ ಕಳಂಕಪ್ರಾಯರಾದವರು ಈ ಮಂದಿ.

ಆದರೆ, ಈ ಜನರು ಏನೇ ಹೇಳಲಿ

ಸೂರ್ಯನ ಪ್ರಕಾಶದಂತೆ ಪರಿಸ್ಪಷ್ಟವಾದ,
ಹುಣ್ಣಿಮೆಯ ಚಂದ್ರನ ಬೆಳದಿಂಗಳಿನಂತೆ
ಪರಿಶುಭ್ರವಾದ ನಮ್ಮ ಸನಾತನಸಂಸ್ಕೃತಿಗೆ
ಅದರ ತವರಾದ ನಮ್ಮ ಭಾರತಭೂಮಿಗೆ
ಎಂದಿಗೂ ಅಳಿವಿಲ್ಲ.

**ಇಂಥಹ ಒಂದು ಶ್ರೇಷ್ಠ ಧರ್ಮದಲ್ಲಿ ಜನ್ಮವನ್ನು ನೀಡಿದ ತಂದೆತಾಯಿಗಳಿಗೆ,**
**ಈ ಧರ್ಮದ ಔನ್ನತ್ಯದ ಪರಿಚಯನ್ನು ಮಾಡಿಸಿದ ಗುರುಗಳಿಗೆ,**
**ಈ ಧರ್ಮವನ್ನು ಜಗತ್ತಿನಲ್ಲಿ ಪ್ರತಿಷ್ಠಾಪಿಸಿದ ಆ ಸರ್ವರಂತರ್ಯಾಮಿಯಾದ ಭಗವಂತನಿಗೆ ಸಾಷ್ಟಾಂಗನಮಸ್ಕಾರಗಳನ್ನು ಸಲ್ಲಿಸಿ,**
**ಪ್ರತೀ ಜನ್ಮದಲ್ಲಿಯೂ ನನ್ನನ್ನು ಈ ಸನಾತನ ಧರ್ಮದ ಅನುಯಾಯಿಯನ್ನಾಗಿ,**
**ಇದೇ ಪವಿತ್ರ ಭರತಭೂಮಿಯ ನೆಲದಲ್ಲಿ,**
**ಅದರಲ್ಲಿಯೂ ತಾಯಿ ಕಾವೇರಿಯ ಮಡಿಲಲ್ಲಿ,**
**ಅವಳಿಗೂ ಜನ್ಮ ನೀಡಿದ ಈ ಪವಿತ್ರನೆಲದಲ್ಲಿ ಹುಟ್ಟಿಸು ಎಂದು ಪ್ರಾರ್ಥಿಸುತ್ತೇನೆ.**

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491